ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಿಗೆ, ತಾಲ್ಲೂಕು ಬಂದಕ್ಕೆ ಐದು ಜನ ಮೆಂಬರುಗಳ ಪ್ರಕಾರ.
ಮೈಸೂರು, ಬೆಂಗಳೂರು ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಬಂದಕ್ಕೆ 4 ಜನ ಮೆಂಬರುಗಳ ಪ್ರಕಾರವೂ, ಮೈಸೂರು ಮತ್ತು ಬೆಂಗಳೂರು ಪಟ್ಣಗಳಿಗಾಗಿ 4 ಜನ ಮೆಂಬರುಗಳು.
ಇತರ ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಬಂದಕ್ಕೆ 4 ಜನ ಮೆಂಬರುಗಳ ಪ್ರಕಾರ.
ಈ ಮೇರೆ ಸಭೆಗೆ ಬರತಕ್ಕ ಮೆಂಬರುಗಳ ಸಂಖೆ 285ಕ್ಕೆ ಮೀರುವದಿಲ್ಲ.

IX. ಸಭೆಯು ಕೀರುವದಕ್ಕೆ ಬಂದು ತಿಂಗಳು ಮುಂಚಿತವಾಗಿಯೇ ಮೇಲ್ಕಂಡ ಮೇರೆ ಮೆಂಬರುಗಳನ್ನು ಚುನಾಯಿಸಿ ಆ ರೀತಿ ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರುಗಳನ್ನು ಬಂದು ಪಟ್ಟಿಯಲ್ಲಿ ಬರದು ಎಲ್ಲರ ತಿಳುವಳಿಕೇ ಬಗ್ಗೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಛೇರಿಯ ಬಹಿರಂಗವಾದ ಸ್ಥಳದಲ್ಲಿ ಸದರೀ ಪಟ್ಟಿಯನ್ನು ಅಂಟಿಸತಕ್ಕದ್ದು. ಚುನಾಯಿಸಿದ ಕೂಡ್ಲೆಯೇ ಆಯಾಯ ಮೆಂಬರುಗಳಿಗೆ ತಿಳಿಸತಕ್ಕದ್ದು.

ತಾರೀಖು 9ನೇ ಸೆಪ್ಟಂಬರ್ 1887.

ಕ್ಯಾಂಪ್ ನಂ. 1187.—ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜನ್ ಮೆ|| ವಿ. ಕೆ. ಸ್ವಾಮಿನಾಥಅಯ್ಯರ್ ಯವರಿಗೆ, 1887ನೇ ಇಸವಿ ಸೆಪ್ಟಂಬರ್ 5ರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಸೆಪ್ಟಂಬರ್ 1887.

ಕ್ಯಾಂಪ್ ನಂ. 1225.—ಮೆ|| ಟಿ. ವಿ. ಆರಮುಗಂವೊದಲಿಯಾರ್ ಯಂ. ಬಿ. ಮತ್ತು ಸಿ ಯಂ. ಯವರು ಅಜಮಾಯಿಷಿ ತರೀಕ್ 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಬಿಎೋಬೀಬ್ ಜುಕ್ತುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸ್ ೧೮೮7ನೇ ಇಸವಿ ಸೆಪ್ಟಂಬರ್ ತಾರೀಖು 13.

ಕನ್ನಡ ಭಾಷೆಗಾಗಿ ಚಿನ್ನದ ಬಿರುದು ಬಿಲ್ಲೆ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಚಿಕ್ಕ ಪೇಟೆಯಲ್ಲಿರುವ ಮೆ|| ರಾ|| ಪಾಲಮಂಡರಾಮರಾವ್ ಎಂಬವರಿಂದ, ಸ್ ೧೮೮೮ನೇ ಇಸವಿಯಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ 20 ರೂಪಾಯಿ ಬೆಲೆಯುಳ್ಳ ಬಂದು ಚಿನ್ನದ ಬಿರುದುಬಿಲ್ಲೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಜ್ಯುಕೇಷನ್ ಸೆಕ್ರೆಟೇರಿ.